**ಮಧ್ಯಂತರ ಅರ್ಜಿ ಸಂಖ್ಯೆ8 ನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ VI ನಿಯಮ 17 ಸಹವಾಚಕ 151 ರಡಿ ಅರ್ಜಿ**

ಅರ್ಜಿದಾರರು ಈ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಕಾರಣಗಳಿಂದಾಗಿ ಅರ್ಜಿದಾರರು/ವಾದಿಗಳು ಸದರಿ ಅರ್ಜಿಯಲ್ಲಿ ತಿಳಿಸಿರುವಂತೆ ವಾದ ಪತ್ರದಲ್ಲಿ ತಿದ್ದುಪಡಿ ಮಾಡಲು ಅನುಮತಿಯನ್ನು ನೀಡಬೇಕೆಂದು ಕೇಳಿಕೊಂಡಿರುತ್ತಾರೆ.

2. ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ಸದರಿ ದಾವೆಯನ್ನು ವಾದಿಗಳು ಪ್ರತಿವಾದಿಗಳ ವಿರುದ್ದ ಭೂ ಸ್ವಾಧೀನದ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡದಂತೆ ಶಾಶ್ವತ ನಿರ್ಬಂಧಕಾಜ್ಞೆ ಹಾಗೂ ಇತರೆ ಪರಿಹಾರಗಳನ್ನು ಕೋರಿ ಸಲ್ಲಿಸಿದ್ದು, ಈ ದಾವೆಯಲ್ಲಿನ ಸ್ವತ್ತು ಮೂಲತ: ವ್ಯವಸಾಯದ ಜಮೀನಾಗಿದ್ದು. ಈ ಜಮೀನು ಸದರಿ ವಾದಿಗಳ ತಾತನವರಾದ ದಾಸಪ್ಪನವರು ಸ್ವಯಾರ್ಜಿತವಾಗಿ ದಿನಾಂಕ:20.02.1958 ರಂದು ನೋಂದಣಿ ಕ್ರಯಪತ್ರ ಸಂಖ್ಯೆ:3732/1957-58 ರ ಕ್ರಯದ ಮೂಲಕ ಖರೀದಿಸಿರುವಂತಹ ಅಸ್ತಿಯಾಗಿದ್ದು, ಅವರ ಪೌತಿ ನಂತರ ವಾದಿಗಳ ತಂದೆ ಎಲ್ಲಪ್ಪ ರವರು ಹಕ್ಕುದಾರರಾಗಿ ಅನುಭವಿಸಿಕೊಂಡು ಬರುತ್ತಿದ್ದು, ಎಲ್ಲಪ್ಪನವರ ಪೌತಿ ನಂತರ ಅವರ ಕಾನೂನುಬದ್ದ ವಾರಸುದಾರರಾಗಿ ವಾದಿಗಳು ಹಕ್ಕು, ಮಾಲೀಕತ್ವ ಹಾಗೂ ನಿರಂತರ ಸ್ವಾಧೀನಾನುಭವದಲ್ಲಿ ಮುಂದುವರೆದಿದ್ದು, ವಾದಿಗಳ ಬಳಿ ಇದ್ದಂತಹ ದಾಖಲೆಗಳನ್ನು ಹಾಗೂ ಸ್ವಾಧೀನಾನುಭವವನ್ನು ಪರಿಶೀಲಿಸಿದ್ದು, ವಾದಿಗಳ ಹಕ್ಕು ಮತ್ತು ಮಾಲೀಕತ್ವವನ್ನು ಖಾತರಿಪಡಿಸಿಕೊಂಡು ಈ ದಾವೆಯ 6 ನೇ ಪ್ರತಿವಾದಿ ಕಾರ್ಯಾಲಯದಿಂದ ದಾವೆಯ ಸ್ವತ್ತನ್ನು ಭೂ ಸ್ವಾಧೀನಪಡಿಸಿಕೊಳ್ಳಲು ಗಜೆಟ್ ಮೂಲಕ ಪ್ರಕಟಣೆಯನ್ನು ಹೊರಡಿಸಿದ್ದು, .ತರುವಾಯ ಸ್ವತ್ತಿನ

ಮಾಲೀಕರಿಂದ ಸ್ವತ್ತನ್ನು ಭೂ ಸ್ವಾಧೀನಪಡಿಸಿಕೊಂಡು, ತರುವಾಯ ಭೂ ಸ್ವಾಧೀನಪಡಿಸಿಕೊಂಡಿರವಂತಹ ಸ್ವತ್ತಿನ ಪರಿಹಾರ ಹಣ ಪಡೆದುಕೊಳ್ಳಲು 6ನೇ ಪ್ರತಿವಾದಿಯ ಕಛೇರಿಯಿಂದ ವಾದಿಗಳಿಗೆ ಅವಾರ್ಡ್ ನೋಟೀಸು ನೀಡಿದ್ದು, ವಾದಿಗಳು ನೈಜ ಹಕ್ಕುದಾರರಾಗಿರುತ್ತಾರೆ. ಮುಂದುವರೆದು ವಾದಿಗಳು ಹೇಳುವುದೇನೆಂದರೆ, ಈ ದಾವಾ ಸ್ವತ್ತಿಗೆ ವಾದಿಗಳನ್ನು ಹೊರತುಪಡಿಸಿ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು ಬಾಧ್ಯತೆಗಳು ಇರುವುದಿಲ್ಲ. ಮುಂದುವರೆದು ವಾದಿಗಳು ಹಣವನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ 1 ರಿಂದ 5ನೇ ಪ್ರತಿವಾದಿಗಳು ಹಾಗೂ ಉದ್ದೇಶಿತ ಪ್ರತಿವಾದಿಗಳು 7 ರಿಂದ 9 ರವರುಗಳು ದಾವಾ ಸ್ವತ್ತಿಗೆ ಯಾವುದೇ ಹಕ್ಕುಬಾಧ್ಯತೆ ಇಲ್ಲದಿದ್ದರೂ ಸಹ ಕೆಲವು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು 6ನೇ ಪ್ರತಿವಾದಿಯು ಭೂ ಸ್ವಾಧೀನಪಡಿಸಿಕೊಂಡಿರುವಂತಹ ವಾದಿಗಳ ಹಕ್ಕುಬಾಧ್ಯತೆಗಳಿಗೆ ಒಳಪಟ್ಟಿರುವಂತಹ ಸ್ವತ್ತಿನ ಭೂ ಸ್ವಾಧೀನದ ಪರಿಹಾರದ ಹಣವನ್ನು ಪಡೆದುಕೊಳ್ಳುವ ಏಕೈಕ ಉದ್ದೇಶದಿಂದ ಸಂಚು ಮಾಡಿದಾಗ ಆ ವೇಳೆಯಲ್ಲಿ ವಾದಿಗಳು ಪ್ರತಿವಾದಿಗಳ ವಿರುದ್ಧ ಕೇವಲ ಶಾಶ್ವತ ನಿರ್ಬಂಕಾಜ್ಞೆ ಮತ್ತು ಭೂ ಪರಿಹಾರದ ಹಣವನ್ನು ಬಿಡುಗಡೆ ಮಾಡದಂತೆ ದಾವೆಯನ್ನು ಹೂಡಿರುತ್ತಾರೆ..

3. ವಾದಿಗಳಾದ ನಾವು ಮುಂದುವರೆದು ಹೇಳುವುದೇನೆಂದರೆ ನಾವು ದಾವೆ ಹೂಡುವ ವೇಳೆಯಲ್ಲಿ ಭೂ ಸ್ವಾಧೀನದ ಪರಿಹಾರದ ಮೊತ್ತವು ಸುಮಾರು 1,00,000.00/- (ಒಂದು ಕೋಟಿ) ರೂಗಳಿಷ್ಟಿರುವುದರಿಂದ ಈ ಘನ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯು 5,00,000-00 ಲಕ್ಷ ರೂಗಳಿಗಿಂತ ಮೇಲ್ಪಟ್ಟಿರುವುದರಿಂದ. ದಾವೆಯನ್ನು ಈ ಘನ ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತೇವೆ.

4. ಮುಂದುವರೆದು ವಾದಿಗಳು ಹೇಳುವುದೇನೆಂದರೆ, ದಾವೆಯನ್ನು ಹೂಡುವ ವೇಳೆಯಲ್ಲಿ ಪಹಣಿ ಮತ್ತು ಕಂದಾಯ ದಾಖಲೆಗಳು ಭೂ ಸ್ವಾಧೀನದ ಅವಾರ್ಡ್ ನೋಟೀಸು ವಾದಿಗಳ ಹೆಸರಿಗೆ ಬಂದಿದ್ದರಿಂದ

ದಾವೆಯ ವಾದ ಪತ್ರದ ಪ್ರಾರ್ಥನೆಯನ್ನು ಕೇವಲ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಮಾತ್ರ ಸಲ್ಲಿಸಿದ್ದು, ಈಗ ಪ್ರತಿವಾದಿ ಸಂಖ್ಯೆ.1 ರಿಂದ 5 ಮತ್ತು ಉದ್ದೇಶಿತ ಪ್ರತಿವಾದಿಗಳು 7 ರಿಂದ 9 ರವರುಗಳು ಹಾಜರುಪಡಿಸಿರುವ ದಾಖಲೆಗಳು ಬಿಡದಿ ಪುರಸಭೆಯ ವ್ಯಾಪ್ತಿಗೆ ಒಳಪಡುವ ದಾಖಲೆಗಳಾಗಿರುವುದರಿಂದ ಈ ದಾಖಲೆಗಳು ದಾವಾ ಸ್ವತ್ತಿಗೂ ಮತ್ತು ಅವರು ಹಾಜರುಪಡಿಸಿರುವ ದಾಖಲೆಗಳಿಗೂ ಒಂದಕ್ಕೊಂಡು ತಾಳೆ ಹೊಂದದ ಕಾರಣ ಪರಿಹಾರದ ಮೊತ್ತವನ್ನು ಬಿಡುಗಡೆ ಮಾಡಿಸಿಕೊಳ್ಳಲು ಪ್ರಯತ್ನಿಸುತ್ತಿರುವುದರಿಂದ, ದಾವಾ ಸ್ವತ್ತಿಗೆ ವಾದಿಗಳೆ ಮಾಲೀಕರೆಂದು ಸಾಬೀತುಪಡಿಸಲು ಅನ್ಯತಾ ಬೇರೆ ಮಾರ್ಗವಿಲ್ಲದೆ ದಾವೆಯ ಪ್ರಾರ್ಥನೆಯ 1 ನೇ ಕಂಡಿಕೆಯಲ್ಲಿ ಅರ್ಜಿಯಲ್ಲಿ ಕೋರಿರುವ ವಿಷಯ ವಸ್ತುವನ್ನು ಸೇರ್ಪಡೆ ಮಾಡಿಕೊಂಡು ತಿದ್ದುಪಡಿ ಮಾಡಲು ಅನುಮತಿ ನೀಡುವಂತೆ ಮಧ್ಯಕಾಲಿನ ಅರ್ಜಿಯನ್ನು ಸಲ್ಲಿಸುತ್ತಿದ್ದು, ಸದರಿ ದಾವೆಯ ವಾದ ಪತ್ರದ ತಿದ್ದುಪಡಿಯು ದಾವೆಯ ಸ್ವರೂಪವನ್ನು ಯಾವುದೇ ಕಾರಣಕ್ಕೂ ಬದಲಾಗುವುದಿಲ್ಲ. ಈ ಮಧ್ಯಕಾಲಿನ ಅರ್ಜಿಯನ್ನು ಪುರಸ್ಕರಿಸಿದಲ್ಲಿ ಪ್ರತಿವಾದಿಗಳಿಗೆ ಯಾವುದೇ ತೊಂದರೆಯುಂಟಾಗುವುದಿಲ್ಲ, ಒಂದು ವೇಳೆ ತಿರಸ್ಕರಿಸಿದಲ್ಲಿ ಅರ್ಜಿದಾರರರಿಗೆ ಭರಿಸಲಾಗದ ಕಷ್ಟನಷ್ಟವುಂಗುತ್ತದೆ. ಆದ್ದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಂಡಿರುತ್ತಾರೆ.

5. ಪ್ರತಿವಾದಿ ಸಂಖ್ಯೆ.1 ರಿಂದ 4 ರವರು ಸದರಿ ಮೇಲ್ಕಂಡ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, ಸದರಿ ತಕರಾರಿನಲ್ಲಿ ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿಯು ಮೇಲುನೋಟಕ್ಕೆ ಊರ್ಜಿತವಾಗತಕ್ಕದ್ದಲ್ಲ. ಮುಂದುವರೆದು ಹೇಳುವುದೇನೆಂರದೆ, ಈ ಪ್ರಸ್ತುತ ದಾವೆಯಲ್ಲಿ ವಾದಿಗಳು ಹೇಳಿರುವ ಎಲ್ಲಾ ಅಂಶಗಳು ಶುದ್ಧ ಸುಳ್ಳಿನಿಂದ ಕೂಡಿದ್ದು, ಈ ಅರ್ಜಿಯನ್ನು ಸಲ್ಲಿಸಲು ಸೃಷಿಮಾಡಿಕೊಂಡ ಅಂಶಗಳಾಗಿರುತ್ತದೆ. ಮುಂದುವರೆದು ಸದರಿ ಈ ದಾವಾ ಸ್ವತ್ತನ್ನು ಈ ದಾವೆಯ 6 ನೇ ಪ್ರತಿವಾದಿ ಕಛೇರಿಯವರು ಭೂ ಸ್ವಾಧೀನಪಡಿಸಿಕೊಂಡು ಹಾಗೂ ಪರಿಹಾರದ ಹಣವನ್ನು ರಾಮನಗರ 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಠೇವಣಿ

ಇಟ್ಟಿದ್ದು, ಸದರಿ ಈ ಭೂ ಸ್ವಾಧೀನ ಪರಿಹಾರದ ಹಣದ ವಿಷಯಕ್ಕೆ ಸಂಬಂಧಪಟ್ಟಂತೆ ಉಭಯ ಪಕ್ಷಕಾರರಲ್ಲಿ ಮನಸ್ತಾಪ ಬಂದು ಸದರಿ ಮಾನ್ಯ ಜಿಲ್ಲಾ ನ್ಯಾಯಾಲಯವು ಸದರಿ ಹಣವನ್ನು ಯಾರಿಗೆ ಬಿಡಬೇಕೆಂದು ವಿಚಾರಣೆಯನ್ನು ಮಾಡಬೇಕಾಗಿರುವುದರಿಂದ ಸದರಿ ನ್ಯಾಯಾಲಯದಲ್ಲಿ ಮಿಸ್ ಸಂಖ್ಯೆ: 170/2019 ಪ್ರಕರಣ ದಾಖಲಾಗಿದ್ದು, ಸದರಿ ಪ್ರಕರಣವು ಈಗ ವಿಚಾರಣೆಯ ಹಂತದಲ್ಲಿ ಇರುತ್ತದೆ. . ಹೀಗಿರುವಲ್ಲಿ ಈ ದಾವಾ ಸ್ವತ್ತಿಗಾಗಲಿ ಹಾಗೂ ಈ ದಾವೆಯ ವಾದಿಗಾಗಲೀ ಯಾವುದೇ ರೀತಿಯ ಹಕ್ಕು ಇಲ್ಲದಿದ್ದರು ಸಹ ಹಾಗೂ ದಾವೆಯ ವಾದಿಗಳು ಈ ದಾವೆಯನ್ನು ಶಾಶ್ವತ ನಿರ್ಭಂದಕಾಜ್ಞೆ ಆದೇಶವನ್ನು ಕೋರಿ ದಾವೆಯನ್ನು ದಾಖಲಿಸಿದ್ದು, ಸದರಿ ದಾವೆಯು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಈ ಅಂಶವನ್ನು ಈ ದಾವೆಯ ಪ್ರತಿವಾದಿ ಸಂಖ್ಯೆ.1 ರಿಂದ 4 ರವರು ತಮ್ಮ ಅಖಿತ ಹೇಳಿಕೆಯಲ್ಲಿ ತಿಳಿಸಿದ್ದು ಹಾಗೂ ಸದರಿ ವಾದ ಪತ್ರವನ್ನು ಸಹ ತಿರಸ್ಕರಿಸಬೇಕೆಂದು ಕ್ರಮಾದೇಶ 7 ನಿಯಮ 11(ಡಿ) ಯಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಅರ್ಜಿಯ ಮೇಲೆ 1 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರು ವಾದ ಮಂಡನೆ ಮಾಡಿದ್ದು, ಆ ನಂತರ ಸದರಿ ಅರ್ಜಿಯ ಮೇಲೆ ವಾದಿಯ ಪರ ವಕೀಲರ ವಾದಕ್ಕಾಗಿ ಮುಂದೂಡಿದ್ದು ಈ ಹಂತದಲ್ಲಿ ಈ ಅರ್ಜಿಯನ್ನು ವಾದಿಗಳು ಪರ ವಕೀಲರು ಸುಮಾರು 3 ವರ್ಷಗಳ ನಂತರ ಸಲ್ಲಿಸಿರುವ ಈ ಅರ್ಜಿಯು ನಿಲ್ಲತಕ್ಕದ್ದಲ್ಲ ವಜಾಗೊಳ್ಳಲು ತಕ್ಕದ್ದಾಗಿರುತ್ತದೆ.

6. ಮುಂದುವರೆದು ವಾದಿಗಳು ಹೇಳುವುದೇನೆಂರೆ, ಸದರಿ ದಾವಾ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಮತ್ತು ಸದರಿ ದಾವಾ ಸ್ವತ್ತನ್ನು ಈಗಾಗಲೇ 6 ನೇ ಪ್ರತಿವಾದಿಯ ಕಛೇರಿಯವರು ಸರ್ಕಾರದ ಆದೇಶದಂತೆ ಅವರ ಸ್ವಾಧೀನಕ್ಕೆ ಪಡೆದುಕೊಂಡು ಅಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನು ನಿರ್ಮಾಣ ಮಾಡಿದ್ದು ಹಾಗೂ ಭೂ ಪರಿಹಾರದ ಹಣವನ್ನು ಜಿಲ್ಲಾ ನ್ಯಾಯಾಲಯದಲ್ಲಿ ಠೇವಣಿ ಇಟ್ಟಿರುತ್ತಾರೆ. ಹೀಗಿರುವಲ್ಲಿ ಸದರಿ ವಾದಿಗಳು ಈಗ ತನ್ನ ದಾವೆಯ ಪ್ರಾರ್ಥನೆಯ ಭಾಗವನ್ನು ಹಕ್ಕು ಘೋಷಣೆಗಾಗಿ ತಿದ್ದುಪಡಿ ಮಾಡಲು ಸಲ್ಲಿಸಿರುವ ಈ ಅರ್ಜಿಯು

ಕಾನೂನು ದೃಷ್ಟಿಯಲ್ಲಿ ಊರ್ಜಿತವಾಗತ್ತಕ್ಕದ್ದಲ್ಲ ವಜಾಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ. ಮುಂದುವರೆದು, ಈ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗಳಿಗೆ ಯಾವುದೇ ರೀತಿಯ ಕಷ್ಟ-ನಷ್ಟ ಉಂಟಾಗುವುದಿಲ್ಲ. ಒಂದು ವೇಳೆ ಸದರಿ ಅರ್ಜಿಯನ್ನು ಪುರಸ್ಕರಿಸಿದರೆ ಪ್ರತಿವಾದಿಗಳ ಸಂಖ್ಯೆ 1 ರಿಂದ 4 ರವರಿಗೆ ತುಂಬಲಾರದ ಕಷ್ಟ-ನಷ್ಟ ಉಂಟಾಗುತ್ತದೆ ಹಾಗೂ ಈ ಮೇಲಿನ ಎಲ್ಲಾ ಕಾರಣಗಳಿಗೂ ಸದರಿ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

7. ಪ್ರತಿವಾದಿ ಸಂಖ್ಯೆ.5 ರವರು ಸಹ ಪ್ರತಿವಾದಿ ಸಂಖ್ಯೆ.1 ರಿಂದ 4 ರವರ ವಿಚಾರಗಳನ್ನು ಪುನರುಚ್ಚರಿದ್ದು, ಸದರಿ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, ಸದರಿ ಅರ್ಜಿಯನ್ನು ವಾದಿಗಳು ಕಾಲ ವಿಳಂಬ ಮಾಡಿ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸಲ್ಲಿಸಿದ್ದು, ಸದರಿ ಮಧ್ಯಂತರ ಅರ್ಜಿಯನ್ನು ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

8. ವಾದಿಗಳ ಮತ್ತು ಪ್ರತಿವಾದಿಗಳ ವಾದ ಮತ್ತು ತಕರಾರರನ್ನು ಕೇಳಲಾಯಿತು.

9. ಅರ್ಜಿಯ ಪ್ರಮಾಣ ಪತ್ರ ಮತ್ತು ಪ್ರತಿವಾದಿ ಸಲ್ಲಿಸಿದ ಆಕ್ಷೇಪಣೆಯನ್ನು ಪರಿಶೀಲಿಸಲಾಗಿದೆ. ಪ್ರಸುತ್ತ ದಾವೆಯನ್ನು ವಾದಿಗಳು ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ದಾವೆಯನ್ನು ಸಲ್ಲಿಸಿದ್ದು, ಅರ್ಜಿದಾರರು ಪ್ರಸ್ತಾವಿತ ತಿದ್ದುಪಡಿ ಅರ್ಜಿಯನ್ನು ವಾದ ಪತ್ರಲ್ಲಿ 4 ನೇ ಪುಟದ 10 ನೇ ಪ್ಯಾ ರಾದಲ್ಲಿ ದಾವಾ ಸ್ವತ್ತು ನಂತರ ಮಾರುಕಟ್ಟೆ ಮೌಲ್ಯ 5,00,000/- ಲಕ್ಷಕ್ಕಿಂತ ಹೆಚ್ಚಿರುವುದರಿಂದ, ಇದೇ ಎಂಬುದಾಗಿ ಮತ್ತು ಅದೇ ಪುಟದ ಪ್ರಾರ್ಥನೆ 1 ರಲ್ಲಿ 1 ನೇ ಸಾಲಿನಲ್ಲಿ ದಾವಾ ಷೆಡ್ಯೂಲ್ ಸ್ವತ್ತಿನ ನಂತರ 1 ಮತ್ತು 2 ನೇ ವಾದಿಗಳು ದಾವಾ ಸ್ವತ್ತಿಗೆ ಮಾಲೀಕರು ಮತ್ತು ಹಕ್ಕುದಾರರೆಂದು ಘೋಷಿಸಬೇಕೆಂತಲೂ ಹಾಗೂ ಸ್ವತ್ತಿಗೆ ಎಂದು ತಿದ್ದುಪಡಿ ಮಾಡುಲು, ಸದರಿ ಅರ್ಜಿಯನ್ನು ಹೂಡಲಾಗಿರುತ್ತದೆ. ಸದರಿ ಮಧ್ಯಂತರ ಅರ್ಜಿಗೆ ಪ್ರತಿವಾದಿಗಳು ತಕರಾರರನ್ನು ಸಲ್ಲಿಸಿ, ಸದರಿ ಅರ್ಜಿಯನ್ನು ವಜಾ

ಮಾಡಬೇಕೆಂದು ಕೇಳಿಕೊಂಡಿರುತ್ತಾರೆ. ಈಗ ಪ್ರಸುತ್ತ ದಾವೆಯಲ್ಲಿ ವಾದಮಂಡನೆಯ ಹಂತದಲ್ಲಿರುತ್ತದೆ. ಮುಂದುವರೆದು, ಸದರಿ ಪ್ರಕರಣವು 2019 ಪ್ರಕರಣವಾಗಿದ್ದು, ಸದರಿ ತಪ್ಪನ್ನು ಸರಿಪಡಿಸುವ ಎಲ್ಲಾ ವಿಫುಲ ಅವಕಾಶಗಳು ಈ ಹಂತದಲ್ಲಿ ಅರ್ಜಿದಾರರಿಗೆ ಇರುವ ಕಾರಣ ಮತ್ತು ಪ್ರಸ್ತಾವಿತ ತಿದ್ದುಪಡಿಯು ದಾವೆಯ ಸ್ವರೂಪವನ್ನು ಅಥವಾ ಕ್ರಮದ ಕಾರಣವನ್ನು ಬದಲಾಯಿಸುವುದಿಲ್ಲ ಎಂಬ ಅಂಶವು ನ್ಯಾಯಾಲಯಕ್ಕೆ ಕಂಡುಬಂದಿದ್ದು, ಅರ್ಜಿಯನ್ನು ಅನುಮತಿಸಲು ಅರ್ಹವಾಗಿರುವುದರಿಂದ ಈ ಕೆಳಗಿನಂತೆಃ

## ಆದೇಶ

ಅರ್ಜಿದಾರರು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ.8 ರ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ.151 ರಡಿ ತಿದ್ದುಪಡಿಯನ್ನು ರೂ.500/- ಖರ್ಚಿನೊಂದಿಗೆ ಅನುಮತಿಸಲಾಗಿದೆ.

ವಾದಿಗಳಿಗೆ/ಅರ್ಜಿದಾರರಿಗೆ ತಿದ್ದುಪಡಿಯನ್ನು ಕೈಗೊಳ್ಳಲು ಮತ್ತು ತಿದ್ದುಪಡಿ ಮಾಡಿದ ಅರ್ಜಿಯನ್ನು ಸಲ್ಲಿಸಲು ನಿರ್ದೇಶಿಸಲಾಗಿದೆ.

**1** ನೇ ಅಪರ ಹಿರಿಯ ಸಿವಿಲ್ ಮತ್ತು ಜೆಎಂಎಫ್ ಸಿ ನ್ಯಾಯಾಧೀಶರು.,
ರಾಮನಗರ.